# ಜೈ ಗುರುದೇವ

## ಅಧ್ಯಾಯ ೧ – ಗುರುದೇವನ ಜನನ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ದಿವ್ಯದರ್ಶನಗಳು

೮೧. ಗರ್ಭಚಾತುರ್ಮಾಸದಲ್ಲಿ ಒಂದು ದಿನ ।
ಚಂದ್ರಮಣಿ ತನ್ನ ಕೋಣೆಯ ಹೊರಗೆ ಬರುತ ॥

೮೨. ಬಾಗಿಲಿನ ಹೊರಗಿನಾ ಚಿಲಕ ಕೀಲಿಸುತ ।
ಮೆಟ್ಟಿಲಿನ ಬಳಿಬಂದು ಕುಳಿತು ಯೋಚಿಸುತ ॥

೮೩. ಬಸವಳಿಯುತಲ್ಲಿಯೇ ಅಡ್ಡಾಗಲವಳು ।
ಮಧುರನೂಪುರದುಲಿಯನಾಗ ಕೇಳಿದಳು ॥

೮೪. ಬಲು ಕುತೂಹಲವಾಯ್ತು ಹಮ್ಮಜ್ಜೆಗಾಗ ।
ಕಾಲ್ಗೆಜ್ಜೆಗಳ ಅಲುಗು ಕಿಂಕಿಣಿಯ ನಾದ ॥

೮೫. ಕೇಳಿಬರುತಿದೆಯಲ್ಲ ಆಶ್ಚರ್ಯವೀಗ ।
ಖಾಲಿಯಿದ್ದುದು ಕೋಣೆ ನಾನು ಬರುವಾಗ ॥

೮೬. ಗುಡಿಸಿ ಸಾರಿಸಿ ಸ್ವಚ್ಛಗೈದಿರುವ ಕೋಣೆಯ ।
ಗೆಜ್ಜೆಗಂಟೆಗಳಿಲ್ಲವಿದ ಬಲ್ಲೆ ನಾನು ॥

೮೭. ಬಾಗಿಲಿಗೆ ಚಿಲುಕವನು ಸಿಲುಕಿಸಿಯೆ ಇಹೆನು ।
ಒಳಗಾರು ಇಲ್ಲ ಮುಚ್ಚಿರುವ ಬಾಗಿಲನು ॥

೮೮. ಕಿಂಕಿಣಿಯ ಇನಿನಾದಕಿಂಬು ಎಲ್ಲಿಂದ ।
ಕುಣಿತವೇನಿದು ತಿಳಿದು ನಾ ಕಾಂಬೆನೆನುತ ॥

೮೯. ಬಾಗಿಲನು ತೆರೆದಿಣುಕಿ ನೋಡಿದಳು ಜವದಿ ।
ನಿಂತಿತಾ ನಾದವೇನಿಲ್ಲ ಕೋಣೆಯಲಿ ॥

೯೦. ಚಿಂತಿಸುತ ಪತಿಯೊಡನೆ ಪೇಳಿದಳು ಪರಿಯ ।
ಖುದಿರಾಮನಿಗೆ ಖಾತ್ರಿಯಾಯ್ತು ಸಂಕೇತ ॥

೯೧. ಭಗವಂತನೇ ತಮ್ಮ ಮಗನಹನು ಎನುತ ।
ಕಾಂತೆ ಕೇಳಿದು ದೈವಲೀಲೆಯಾ ಚರಿತ ॥

೯೨. ಸಂತಸದೊಳವತಾರಕಾಗಿ ಕಾಯುವದು ।
ಇಂತೆಲ್ಲ ಘಟನೆಗಳ ಕಾರಣವ ತಿಳಿದು ॥

೯೩. ಕಾಣಿಸುತಲಿರುವುವು ದಿವ್ಯ ದರ್ಶನಗಳು ।
ಇದ ಕೇಳಿ ಚಂದ್ರಮಣಿ ಮನದಿ ಮುದಗೊಂಡಳು ॥

೯೪. ಇರಲೊಂದು ದಿವಸ ವಿಸ್ಮಯವದಾಯ್ತಲ್ಲಿ ।
ಚಂದ್ರಕಾಂತಿ ಸಹಸ್ರ ಪ್ರಭೆಗು ಮಿಗಿಲಾಗಿ ॥

೯೫. ಶೋಭಿಸುವ ಸೌಂದರ್ಯ ಚಿಕ್ಕ ಮಗುವಾಗಿ ।
ಮಡಿಲಿನೊಳಗಾಡುವಂದದಿ ಭಾಸವಾಗಿ ॥

೯೬. ಮಗು ತನ್ನ ಕೊರಳಸಾಲಿಂಗಿಸುತ ಜೋತು ।
ಎದೆಯ ಮೇಲೇರಿಳಿದು ಬಹು ಆಟಗೈದು ॥

೯೭. ತೊದಲ್ನುಡಿಯನಾಡುತಿರೆ ಕೇಳಿ ಮನವಲಿದು ।
ಚೆನ್ನಾಗಿ ಮುದ್ದಾಡಬೇಕೆಂದು ನಲಿದು ॥

೯೮. ತಡವರಿಸಿ ತೆಕ್ಕೆಯೊಳು ಹಿಡಿಯಲೆತ್ನಿಸಲು ।
ಒಡನೆ ಜಾರಿತು ಮಗುವು ಕೈಗೆಟುಕದಿರಲು ॥

೯೯. ಗಡಿಬಿಡಿಯ ಗಾಬರಿಯೊಳವಳು ಹೌಹಾರಿ ।
ಮಗುವೆಲ್ಲಿ ಹೋಯ್ತೆಂದು ಭಯದಿಂದ ಚೀರಿ ॥

೧೦೦. ಎಲ್ಲಿರುವೆ ಬಾ ಕಂದ ಎಂದು ಕರೆಯುತಲಿ ।
ಎಲ್ಲೆಡೆಗೆ ಸುತ್ತಾಡಿ ಹುಡುಕಿ ಅಳಲುತಲಿ ॥

೧೦೧. ಮನದ ಭ್ರಮೆಯೇ ಹೊರತು ವಾಸ್ತವವಿದಲ್ಲ ।
ಎನುತ ತಾನೇ ತಿಳಿದು ಸುಮ್ಮನಿಹಳಲ್ಲ ॥

೧೦೨. ಆ ಗರ್ಭಧಾರಣೆಯ ಕಾಲದಲಿ ನಡೆದ ।
ಅದ್ಭುತಾಶ್ಚರ್ಯಗಳಿಗೇನೆಂಬೆ ವಿವರ ॥

೧೦೩. ಕೋಟಿ ಚಂದ್ರನ ಕಾಂತಿಯದು ಮಿಂಚಿದಂತೆ ।
ವೀಣೆ ಕೊಳಲು ಮೃದಂಗ ನಾದವುಲಿದಂತೆ ॥

೧೦೪. ಅಗರುಚಂದನ ಗಂಧಪರಿಮಳದ ಸೊಗಸು ।
ಬಗೆಬಗೆಯೊಳೊದಗಿ ಮುದಗೊಳಿಸುತಿರೆ ಮನಸು ॥

೧೦೫. ಮನೆಯ ಸುತ್ತಲು ಕಮಲವನದ ಸೊಬಗನ್ನು ।
ಹಲವು ಬಗೆಯ ಸುಗಂಧ ಪರಿಮಳಗಳನ್ನು ॥

೧೦೬. ಗೋಲೋಕ ಭೂಲೋಕಕಿಳಿದ ಬಗೆಯನ್ನು ।
ಆಲೋಕಿಸುತ ನಲಿವಳಾಗಾಗ ತಾನು ॥

೧೦೭. ನವಮಾಸ ಕಳೆದು ದಶಮಾಸ ಮೈದೋರೆ ।
ಅವತಾರ ಕಾಲವದು ಸನ್ನಿಹಿತವಾಗೆ ॥

೧೦೮. ನಸುಕಿನೊಳು ಬೇನೆ ಕಾಣಿಸಲು ಕಾತರದಿ ।
ಉಸುರಿದಳು ಪತಿಯೊಡನೆ ಪಿಸುಮಾತಿನಲ್ಲಿ ॥

೧೦೯. ಹೆರಿಗೆಯ ನೋವೆನ್ನನಾವರಿಸುತಿಹುದು ।
ಪರಿಯೇನೋ ಮುಂದೆ ಸಂಕಟವಾಗುತಿಹುದು ॥

೧೧೦. ಖುದಿರಾಮನರುಹಿದನು ಅವಸರವು ಸಲ್ಲ ।
ರಘುವೀರನಿಗೆ ಪೂಜೆ ಮುಗಿದಿಲ್ಲವಲ್ಲ ॥

೧೧೧. ಉದ್ಭವವದೆಂತು ಈ ಕಾಲದೊಳಗಹುದು ।
ಸುದತಿ ನೀ ಸಹಿಸಿಕೊ ಪರಿಯನ್ನು ತಿಳಿದು ॥

೧೧೨. ದೇವರಿಗೆ ಪೂಜೆ ನೈವೇದ್ಯ ಸಲಿಸುವೆನು ।
ನಂತರವೆ ನೀನು ಪ್ರಸವಿಸುವೆ ಮಗುವನ್ನು ॥

೧೧೩. ಎಂದೆನುತ ಪೂಜೆಗಣಿಯಾದನವ ತಾನು ।
ಅಂದಿನಾದಿನವುರುಳಿ ಸರಿಸೆ ಹಗಲನ್ನು ॥

◆